ಕೋರ್ಟುಗಳಿಗೆ 10 ವರ್ಷಗಳಿಂದ ಕಟ್ಟಡ ಇಲ್ಲ. ಆದ್ಯತೆ ಆಧಾರದ ಮೇಲೆ ಹಣಕಾಸು ಎಷ್ಟು ಸಿಗುತ್ತದೆ ನೋಡಿಕೊಂಡು ಕಟ್ಟಡವನ್ನು ಮಾಡುತ್ತೇವೆ. ಕೊರಟಗೆರೆಯಲ್ಲಿ ಅಷ್ಟು ವಿಶೇಷವಾಗಿ ಕಷ್ಟ ಇದ್ದರೆ ಅದಕ್ಕೆ ಆದ್ಯತೆ ಕೊಡುವ ಪ್ರಯತ್ನ ಮಾಡೋಣ.

ಶ್ರೀ ಸಿ. ವೀರಭದ್ರಯ್ಯ : ಈ ಕೂಡಲೇ ಕಟ್ಟಡ ಆಗಲೇಬೇಕು. ಇಲ್ಲದಿದ್ದರೆ ಬಹಳ ತೊಂದರೆ ಆಗುತ್ತದೆ. ಜನಗಳು ರೋಡಿನಲ್ಲಿ ಬಿಸಿಲಿನಲ್ಲಿ ನಿಂತುಕೊಂಡು ಕಾಯಬೇಕಾದ ಸ್ಥಿತಿ ಇದೆ.

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಗೊತ್ತಿರುವ ಹಾಗೆ ಕೊರಟಗೆರೆ ಹಿಂದುಳಿದ ಪ್ರದೇಶ. ಅದಕ್ಕೆ ತಾವು ಮೊದಲನೆಯ ಆದ್ಯತೆ ಕೊಟ್ಟು ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಸಹಕರಿಸುತ್ತಿರೆಂದು ನಾನು ಕೇಳುತ್ತಿದ್ದೇನೆ. ಅಲ್ಲಿ ಬಹಳ ಅವಶ್ಯಕತೆ ಇದೆ. ದಯವಿಟ್ಟು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅಲ್ಲಿ ಅವಶ್ಯಕತೆ ಇದೆ ಎಂದು ತಾವು ಹೇಳತಕ್ಕಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದೇನೆ. ಹೆಚ್ಚು ಕಷ್ಟ ಇದ್ದರೆ ವರ್ಷದ ಬಜೆಟ್‌ನ್ನು ನೋಡಿಕೊಂಡು ಮೊದಲೇ ಅದನ್ನು ಮಾಡೋಣ.

ಸಿಂಧನೂರು ಹಳ್ಳ ಹಾಗೂ ಪೋತನಾಳ ಹಳ್ಳಕ್ಕೆ ಸೇತುವೆಯ ನಿರ್ಮಾಣ.

155-ಶ್ರೀ ಬಿ. ಹಂಪನಗೌಡರ್ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆರೆಹಾವಳಿಯ ಪ್ರವಾಹದಿಂದ ಸಿಂಧನೂರು ಹಳ್ಳ ಹಾಗೂ ಪೋತನಾಳ ಹಳ್ಳಕ್ಕೆ ಕಟ್ಟಿದ ಸೇತುವೆ ನಾಶವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಹೊಸ ಸೇತುವೆ ನಿರ್ಮಾಣ ಮಾಡುವ ಉದ್ದೇಶ ಸರಕಾರಕ್ಕೆ ಇದೆಯೇ?*

ಇ) *ಹಾಗಿದ್ದಲ್ಲಿ, ಹೊಸ ಸೇತುವೆಗಳ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಧ್ಯದಲ್ಲಿ ಈ ಎರಡೂ ಮುಳುಗು ಸೇತುವೆಗಳನ್ನು ದುರಸ್ತಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಸಿಂಧನೂರು ಹಳ್ಳಕ್ಕೆ ಹೊಸ ಪರ್ಯಾಯ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಹಂಪನಗೌಡ : ನಾನು ಸಿಂಧನೂರು ಹಳ್ಳಿ ನೆರೆಹಾವಳಿಯಿಂದ ಸೇತುವೆ ಸಂಪೂರ್ಣವಾಗಿ ನಾಶವಾಗಿದೆ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರದಲ್ಲಿ ಎರಡು ಸೇತುವೆಗಳು ನೆರೆ ಹಾವಳಿಯಿಂದ ತುಂಬಾ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ ಮೂರನೆಯ ಪ್ರಶ್ನೆಗೆ ಉತ್ತರದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ನಾನು ಕೇಳುತ್ತಿರುವುದು ಈ ಸೇತುವೆ ನಾಲ್ಕು ಜಿಲ್ಲೆಗಳಿಗೆ ಸಂಪರ್ಕ ಹೊಂದಿರತಕ್ಕಂತಹ ಸೇತುವೆ. ಇದು ಬಹಳಷ್ಟು

ತೀವ್ರಗತಿಯಲ್ಲಿ ಆಗಬೇಕು. ನಿಗದಿತವಾಗಿ ತಾವು ಯಾವಾಗ ಆದನ್ನು ಪ್ರಾರಂಭ ಮಾಡುತ್ತೀರಿ ಎಂಬುದರ ಬಗ್ಗೆ ಸರ್ಕಾರ ಹೇಳಬೇಕು. ನಿಗದಿತ ವೇಳೆ ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಆದಕ್ಕೆ ಪರಿಶೀಲನೆ ಆಗಬೇಕಾಗುತ್ತದೆ. ಷೋತನಾಳ್ ಹಳ್ಳಕ್ಕೆ ಲೊಯರ್ ಕ್ರಾಸ್‌ವೇ ಸಾಕು. ಆದರೆ ಸಿಂಧನೂರ್ ಹಳ್ಳಕ್ಕೆ ಸೇತುವೆ ಬೇಕಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದನ್ನು ಪರಿಶೀಲನೆ ಮಾಡಬೇಕಾಗಿದೆ. ಎಸ್ಟಿಮೇಟು ವಗೈರೆ ಆದ ನಂತರ ಕಾರ್ಯ ಪ್ರಾರಂಭ ಮಾಡಬೇಕಾಗುತ್ತದೆ. ಹಾಗೂ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಸ್ವಲ್ಪ ತಡವಾಗಬಹುದು. ಆದರೆ ಹೆಚ್ಚು ತಡವಾಗುವುದಿಲ್ಲ. ನಾನು ಆದನ್ನು ನೋಡಿದ್ದೇನೆ. ಬಹಳ ದಿವಸ ಅಲ್ಲಿಯೇ ಓಡಾಡಿದ್ದೇನೆ. ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಈ ಸಾರಿ ತುಂಬಾ ತೊಂದರೆ ಆಗಿದೆ ಎಂಬುದು ನನಗೆ ಗೊತ್ತು ಜಾಗ್ರತೆಯಾಗಿ ಇದು ಆಗಲು ನಾವು ಪ್ರಯತ್ನ ಮಾಡೋಣ.

ಶ್ರೀ ಬಿ. ಹಂಪನಗೌಡ : ಈ ಸೇತುವೆ ನಾಲ್ಕು ಜಿಲ್ಲೆಗಳಿಗೆ ಕಲ್ಪಿಸುತ್ತದೆ. ಈ ಸೇತುವೆ ಮೇಲೆಯೇ ಲಾರಿಗಳು ಬಸ್ಸುಗಳು ಹಾಗೂ ರೈತರು ಬೆಳೆದಂತಹ ಬೆಳೆಗಳು ಹೋಗಬೇಕಾಗುತ್ತದೆ. ಇದು ಒಂದು ಪ್ರಾಮುಖ್ಯವಾದ ಸೇತುವೆ. ಆದುದರಿಂದ ಬಹಳ ತ್ವರಿತವಾಗಿ ಈ ಕೆಲಸ ಆಗಬೇಕಾಗುತ್ತದೆ. ಹೆದ್ದಾರಿ ಮಧ್ಯೆ ಇರತಕ್ಕ ಸೇತುವೆ ಇದಾಗಿದೆ. ನನಗೆ ನಿಗದಿತವಾದ ಉತ್ತರ ಬೇಕು. ಈ ವರ್ಷ ಅಥವಾ ಮುಂದಿನ ವರ್ಷ ತೆಗೆದುಕೊಳ್ಳುತ್ತೀರಾ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ಪರಿಶೀಲನೆ ಎಂದರೆ 10 ವರ್ಷ ಆಗುತ್ತದೆ ಮಾನ್ಯ ಸಚಿವರು ಯಾವಾಗ ಮಾಡುತ್ತೇವೆ ಎಂಬುದನ್ನು ಹೇಳುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : 10 ವರ್ಷ ಪರಿಶೀಲನೆ ಮಾಡುವಂತಿದ್ದರೆ ನಾವು ಹೇಳುವುದೇ ಇಲ್ಲ ಹಾಗೇನಾದರೂ ಇದ್ದಿದ್ದರೆ ಇಲ್ಲ ಎಂದು ಹೇಳಿಬಿಡುತ್ತಿದ್ದೆ. ಜಾಗ್ರತೆಯಾಗಿ ಮಾಡುತ್ತೇವೆ ಬಹಳ ಮಟ್ಟಿಗೆ 93ರಲ್ಲಿ ಆದರ ಅಭಿಪ್ರಾಯ ಗೊತ್ತಾಗಬಹುದು.

ಶ್ರೀ ಬಿ. ಹಂಪನಗೌಡ : ಹೋದ ವರ್ಷ ಇದೇ ಮಳೆಗಾಲದಲ್ಲಿ ಆ ಸೇತುವೆ ಸಂಪೂರ್ಣ ನಾಶವಾಯಿತು. ಪುನಃ ಈ ವರ್ಷ ಪೂರ್ಣವಾಗಿ ನೆಲಸಮವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇನ್ನೂ ಯೋಚನೆ ಮಾಡಬೇಕು, ಪರಿಶೀಲನೆ ಮಾಡಬೇಕು ಎಂದು ಹೇಳುವುದು ಸರಿಯಲ್ಲ ಈಗ ನೆರೆ ಹಾವಳಿಯ ದುಡ್ಡು ಬಂದಿದೆ ಅದರಲ್ಲಿ ತೆಗೆದುಕೊಳ್ಳಬಹುದು.

ಶ್ರೀ ಕೆ.ಹೆಚ್. ರಂಗನಾಥ್ : ನೆರೆಹಾವಳಿಯಿಂದ ತೊಂದರೆ ಆಗಿರತಕ್ಕ ವಿಚಾರ ಗೊತ್ತಾದ ತಕ್ಷಣವೇ ಸಂಚಾರಕ್ಕಾಗಿ ತಾತ್ಕಾಲಿಕ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ ಅಲ್ಲಿ ಉತ್ತಮವಾದ ಸೇತುವೆ ಆಗಬೇಕು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಜಾಗ್ರತೆಯಾಗಿ ಪರಿಶೀಲನೆ ಎಂದರೆ ಎಗ್ಸಾಮೀನ್ ಮಾಡಿಸತಕ್ಕದ್ದು. ಆದನ್ನು ಮಾಡಿಸಿ, ಎಸ್ಟಿಮೇಟ್ ಮಾಡಿಸಿ ಮುಂದಕ್ಕೆ ಕ್ರಮ ಕೈಗೊಳ್ಳುತ್ತೇವೆ ಒಟ್ಟಿನಲ್ಲಿ ಈ ಕೆಲಸವನ್ನು ಜಾಗ್ರತೆ ಮಾಡಲು ಕ್ರಮ ಕೈಗೊಳ್ಳುತ್ತೇವೆ.